## ಮಾತು-ಕತೆ

**ವೀಣಾ:** ಈ ಶ್ರೇಯಸ್ಸು ನನ್ನ ಅಪ್ಪಅಮ್ಮ ಮತ್ತು ಗುರುಗಳಿಗೆ ಸಲ್ಲಬೇಕು. ಕೆಮಿಸ್ಟ್ರಿ ಪ್ರಾಧ್ಯಾಪಕರಾಗಿದ್ದ ನನ್ನ ತಂದೆ ಪ್ರೊ. ಬಿ.ಎಚ್. ಎಲಬುರ್ಗಿಯವರು ಸಂಶೋಧಕರು, ಆಯುರ್ವೇದ ತಜ್ಞರಾಗಿದ್ದರು. ಸಾಹಿತ್ಯದಲ್ಲೂ ಅವರಿಗೆ ತುಂಬಾ ಆಸಕ್ತಿಯಿತ್ತು. ಆ ಕಾಲದ ಮುಖ್ಯ ಲೇಖಕರ ಕೃತಿಗಳು ಮನೆಯಲ್ಲಿ ಇದ್ದೇ ಇರ್ತಾ ಇದ್ದವು. ನನ್ನ ಅಮ್ಮ ಇಂದಿರಾ ಆ ಕಾಲದ ಪ್ರಗತಿಶೀಲ ಮರಾಠೀ ಸಾಹಿತ್ಯದ ಅಭಿಮಾನೀ ಓದುಗರಾಗಿದ್ದರು. ಖಾಂಡೇಕರ್, ಗಾಡ್ಗೀಳ್ ಮೊದಲಾದವರ ಕೃತಿಗಳು, ಮರಾಠಿ ಪತ್ರಿಕೆಗಳು ಈ ಎಲ್ಲವನ್ನೂ ನಾನು ಬಾಲ್ಯದಿಂದಲೇ ಓದ್ತಾ ಇದ್ದೆ. ಹಿಂದಿ, ಸಂಸ್ಕೃತವನ್ನೂ ಕಲಿಸುವ ವ್ಯವಸ್ಥೆ ಮಾಡಿದ್ದೂ ನನ್ನ ತಾಯಿಯೇ. ಸ್ತ್ರೀಸ್ವಾತಂತ್ರ್ಯದ ಬಗ್ಗೆ ಅವರಿಗೆ ಸ್ಪಷ್ಟತೆಯಿತ್ತು. ಅವರಿಗೆ ಎಂತಹ ಮಹತ್ವಾಕಾಂಕ್ಷೆಯಿತ್ತು ಅಂದ್ರೆ, ಐದನೆಯ ವಯಸ್ಸಿಗೆ ನನಗೆ ಓದುವ ಹವ್ಯಾಸ ಬೆಳೆಸಿ, ಆರನೆಯ ವಯಸ್ಸಿಗೆ ಒಂದು ಕತೆ ನಾನು ಬರೆದದ್ದೇ ಇದಕ್ಕೆ ಸಾಕ್ಷಿ. ನನಗೆ ಪಾಠ ಹೇಳಿಕೊಟ್ಟ ಹಲವಾರು ಗುರುಗಳು, ಹಾಲಗೇರಿ ಮಾಸ್ತರು, ಅನಂತ ಹುದ್ದಾರ ಮಾಸ್ತರು... ಇವರ ಋಣ ಎಂದೂ ತೀರಿಸಲಿಕ್ಕೆ ಸಾಧ್ಯವಿಲ್ಲ.

**ವೀಣಾ:** ಆಶಾ, ನಿಮ್ಮ ಬಾಲ್ಯವಿದ್ಯಾಭ್ಯಾಸದ ಬಗ್ಗೆ ತುಸು ಹೇಳಿ. ನನಗಿಂತ ಮುಂದಿನ ತಲೆಮಾರಿನವರು ನೀವು. ನಿಮ್ಮ ಬಾಲ್ಯದ ವಾತಾವರಣಕ್ಕೂ ನಮ್ಮದಕ್ಕೂ ಏನಾದರೂ ವ್ಯತ್ಯಾಸವಿದೆಯಾ ಅನ್ನುವ ಕುತೂಹಲವಿದೆ ನನಗೆ.

**ಆಶಾ:** ನನ್ನ ತಂದೆ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಇದ್ದವರು. ಹೀಗಾಗಿ ಮೂರುಮೂರು ವರ್ಷಕ್ಕೂ ವರ್ಗ. ಒಂದು ರೀತಿ ವ್ಯವಸ್ಥಿತ ಅಲೆಮಾರಿಗಳು ಅಂದ್ರೂ ನಡೆಯುತ್ತೆ. ಅಪ್ಪಅಮ್ಮ ಇಬ್ಬರಿಗೂ ಸಾಹಿತ್ಯದಲ್ಲಿ ತುಂಬಾ ಆಸಕ್ತಿ. ತಂದೆ ಬರ್ನಾಡ್ ಷಾನ ಪರಮ ಅಭಿಮಾನಿ. ರಂಗಭೂಮಿ ಅವರ ಮೊದಲ ಪ್ರೀತಿ. ಪ್ರಯೋಗಶೀಲ ನಾಟಕಗಳಿಗೆ ನಾವು ಯಾವ ಊರಿನಲ್ಲಿದ್ದರೂ ಬೆಂಗಳೂರಿಗೆ ಬಂದು ನೋಡ್ತಾ ಇದ್ವಿ. ಮನೆಯಲ್ಲೇ ಒಂದು ಲೈಬ್ರರಿಗಾಗೋ ಅಷ್ಟು ಪುಸ್ತಕಗಳಿದ್ವು. ಹೀಗಾಗಿ ನಾನು ಪುಸ್ತಕದ ಹುಳುವಾಗಿದ್ದು ಸಹಜವಾಗಿತ್ತು. ಸಣ್ಣ ಸಣ್ಣ ನಗರಗಳಲ್ಲಿ ಅಪರೂಪಕ್ಕೆ ಹೊಸಅಲೆಯ ಸಿನಿಮಾಗಳು ಬಂದರೆ ಅಪ್ಪ 'ಸ್ಕೂಲುಕಾಲೇಜು ತಪ್ಪಿಸಿಯಾದರೂ ಹೋಗು' ಅಂತಿದ್ರು. ಮುಂದೆ ಕಾಲೇಜಿನಲ್ಲಿ, ಸೌಮಿತ್ರಾ ಚಕ್ರವರ್ತಿ, ಪಿ.ಎಸ್. ಗೀತಾ, ಎಂ.ಸಿ. ಪ್ರಕಾಶ್, ಗುರುರಾಜ ಕರ್ಜಗಿ, ಟಿ.ಎಸ್. ಸತ್ಯವತಿ ಇವರೆಲ್ಲಾ ನನ್ನ ಸಾಹಿತ್ಯಾಭಿರುಚಿಯನ್ನು, ವ್ಯಕ್ತಿತ್ವವನ್ನು ತುಂಬಾ ಪ್ರಭಾವಿಸಿದರು. ಎಂ.ಎ. ಮಾಡುವ ಹೊತ್ತಿನಲ್ಲಿ ಕಿ.ರಂ., ಡಿ.ಆರ್. ನಾಗರಾಜ್, ಕೆ.ವಿ.ಎನ್ ನನ್ನ ದಾರಿ ಯಾವುದು ಅನ್ನೋದನ್ನ ತೋರಿಸಿಕೊಟ್ಟರು. ನನ್ನ ಬಗ್ಗೆ ನನಗೆ ವಿಶ್ವಾಸ ತುಂಬಿದ ಕಲ್ಬುರ್ಗಿ ಸರ್ ಮತ್ತು ಅನಂತಮೂರ್ತಿಯವರನ್ನೂ ನಾನಿಲ್ಲಿ ನೆನಪಿಸಿಕೊಳ್ಳಬೇಕು. ಹಾಗೇನೇ ಜಿಎಸ್‌ಎಸ್ ಕೂಡ ನನಗೆ ತುಂಬಾ ಪ್ರೋತ್ಸಾಹ ಕೊಟ್ಟರು.

**ಆಶಾ:** ನಿಮ್ಮ ಕಾಲೇಜು ವಿದ್ಯಾಭ್ಯಾಸ, ಆಗಿನ ಪ್ರಭಾವ, ಪ್ರೇರಣೆಗಳು, ಆಕರ್ಷಣೆಗಳು...

**ವೀಣಾ:** ಆರಂಭದಿಂದಲೂ ರ‍್ಯಾಂಕ್ ವಿದ್ಯಾರ್ಥಿನಿ ಅನ್ನೋ ಕಾರಣಕ್ಕೆ ನಾನು ಅಧ್ಯಾಪಕರ ನೆಚ್ಚಿನ ವಿದ್ಯಾರ್ಥಿನಿ. ಮುಂದೆ ಶಾಂತಿನಾಥ ದೇಸಾಯರ 'ಮುಕ್ತಿ' ನನ್ನನ್ನ ಕ್ಲೀನ್ ಬೌಲ್ಡ್ ಮಾಡಿತು. ಆ ಕಾಲದ ದಂತಕಥೆಯಾಗಿದ್ದ ಮೆನಜಿಸ್‌ರ ವಿದ್ಯಾರ್ಥಿನಿ ಆಗಬೇಕು ಅಂತ ಧಾರವಾಡಕ್ಕೆ ಇಂಗ್ಲಿಷ್ ಮೇಜರ್ ತೊಗೊಂಡು ಕರ್ನಾಟಕ ಕಾಲೇಜಿಗೆ ಸೇರಿದೆ. ಅಲ್ಲಿ ಗೀತಾ ಕುಲಕರ್ಣಿ, ಶಾಂತಾದೇವಿ ಮಾಳವಾಡ ಮೊದಲಾದವರ ಸಾಂಗತ್ಯ ದೊರೆಯಿತು. ಪುಣೇಕರ್, ಆಮೂರ, ದೇಸಾಯಿ, 'ಸಂಕ್ರಮಣ'ದ ಮೂವರು ಗೆಳೆಯರು, ಬಸವರಾಜ ಕಟ್ಟೀಮನಿ... ಹೀಗೆ ಅನೇಕ ಗುರುಗಳು ಮತ್ತು ಲೇಖಕರ ಒಡನಾಟದಲ್ಲಿ ನಾನು ರೂಪುಗೊಂಡೆ. ಕೊಳಲು,